**<u>ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು 3ನೇ ಪ್ರತಿವಾದಿ ಪರ ಶ್ರೀ. ಎ ಬಿ ಕೆ ವಕೀಲರಿಂದಃ-</u>**

1. ನನ್ನ ತಂದೆಗೆ ನಾನು ಸೇರಿ ಮೂರು ಜನ ಮಕ್ಕಳು ಎಂದರೆ ಸರಿ. ಅವರಲ್ಲಿ ನಾನು, ವಾದಿ ನಾಗೇಶ ಮತ್ತು ಸತೀಶ ಎಂದರೆ ಸರಿ. ನನ್ನ ಸಹೋದರ ಸತೀಶ ನನ್ನ ತಂದೆಯ ಎರಡನೇ ಮಗ ಎಂದರೆ ಸರಿ. ನನ್ನ ಸಹೋದರ ಸತೀಶ ತಾನು ಬದುಕಿದ್ದಾಗ ವಿವಾಹ ಆಗಿದ್ದರು ಎಂದರೆ ಸರಿ. ನನ್ನ ಸಹೋದರ ಸತೀಶ ಗೆಜ್ಜಲಗೆರೆ ಗ್ರಾಮದ ನಂದಿನಿಯವರನ್ನು ಮದುವೆ ಆಗಿದ್ದರು ಎಂರದೆ ಸರಿ. ನನ್ನ ಸಹೋದರ ಮೃತ ಸತೀಶನಿಗೆ 3ನೇ ಪ್ರತಿವಾದಿ ಸಹನಾ ಏಕೈಕ ಪುತ್ರಿ ಎಂದರೆ ಸರಿ. ನನ್ನ ಸಹೋದರ ಸತೀಶ ದಿ 29.04.2006ನೇ ಇಸವಿಯಲ್ಲಿ ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ನನ್ನ ಸಹೋದರ ಸತೀಶ ತೀರಿಕೊಳ್ಳುವ ಸಮಯಕ್ಕೆ 3ನೇ ಪ್ರತಿವಾದಿಯ ವಯಸ್ಸು ಸುಮಾರು ಒಂದು ವರ್ಷ ಇತ್ತು.

2. 3ನೇ ಪ್ರತಿವಾದಿಯ ತಂದೆ ತೀರಿಕೊಂಡ ನಂತರ 3ನೇ ಪ್ರತಿವಾದಿ ತನ್ನ ತಾಯಿಯ ತಾಯಿ ಮನೆಯಲ್ಲಿ ಸ್ವಲ್ಪ ದಿನಗಳ ಕಾಲ ಇದ್ದರು ಎಂದರೆ ಸಾಕ್ಷಿ ಶಾಶ್ವತವಾಗಿ ಅಲ್ಲೆ ಇದ್ದರು ಎನ್ನುತ್ತಾರೆ. 3ನೇ ಪ್ರತಿವಾದಿಯು ತನ್ನ ತಾಯಿಯ ತಾಯಿಯ ಮನೆಯಲ್ಲೆ ಇದ್ದು ಕೊಂಡು ಬೆಳಕೆರೆ ಗ್ರಾಮಕ್ಕೂ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯ ಮದುವೆಯ ನಿಶ್ಚಿತಾರ್ಥ ಮತ್ತು ಮದುವೆಗೆ ತಾವು ಹೋಗಿದ್ದೀರಾ ಎಂದರೆ ಸಾಕ್ಷಿ ನಿಶ್ಚಿತಾರ್ಥಕ್ಕೆ ನಾನು ಮತ್ತು ನನ್ನ ತಾಯಿ, ನನ್ನ ಗಂಡ ಹೋಗಿದ್ದೇವು, ಮದುವೆಗೆ ನನ್ನ ತಾಯಿ ಬಂದಿರಲಿಲ್ಲ ನಾನು ಮತ್ತು ನನ್ನ ಗಂಡ ಹೋಗಿದ್ದೇವು ಎಂದು ನುಡಿಯುತ್ತಾರೆ.

3. ದಾವಾ ಐಟಂ ನಂ.1ರ ಸ್ವತ್ತು ನಮ್ಮ ತಂದೆಗೆ ಎಲ್ ಆರ್ ಎಫ್ ಮೂಲಕ ಸ್ವಯಾರ್ಜಿತವಾಗಿ ಮಂಜೂರಾದ ಆಸ್ತಿ ಎಂದು ತಮ್ಮ ಪ್ರಮಾಣ ಪತ್ರದಲ್ಲಿ ಹೇಳಿದ್ದು ಇದರ ಪೂರಕವಾಗಿ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ದಾವಾ ಐಟಂ 1ರ ಸ್ವತ್ತು ನಮ್ಮ ತಂದಗೆ ಭೂ ನ್ಯಾಯಾ ಮಂಡಳಿಯಿಂದ ಮಂಜೂರಾದ ಆಸ್ತಿ ಎಂದು ತಾವು ಹೇಳಿದ್ದು ನಿಡಿ-9ರಲ್ಲಿ ಭೂ ನ್ಯಾಯಾ ಮಂಡಳಿಯಿಂದ ಸಿದ್ದೇಗೌಡ ಬಿನ್ ಲೇಟ್ ಬೋರೆಗೌಡರವರಿಗೆ ಸ ನಂ.31ರಲ್ಲಿ 2 ಎಕರೆ 0.9.08 (ಒಂಭತ್ತುವರೆ ಗುಂಟೆ) ಗುಂಟೆ ಎಂದು ನಮೂದು ಆಗಿದೆ ಎಂದರೆ ಸರಿ. ದಾವಾ ಐಟಂ ನಂ.1ರ ಸ್ವತ್ತು ನಮ್ಮ ತಂದೆಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಖರೀದಿ ಮಾಡಿದ ಆಸ್ತಿ ಎನ್ನುತ್ತಾರೆ. ಆಗಾದರೆ ನಮ್ಮ ತಂದೆ ಯಾರಿಂದ ದಾವಾ ಐಟಂ ನಂ.1ರ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

4. ತಮ್ಮ ತಂದೆ ಬದುಕಿದ್ದ ಕಾಲದಲ್ಲಿ ಏನಾದರೂ ದಾವಾ ಆಸ್ತಿಗಳ ಭಾಗ ಮಾಡಿಕೊಟ್ಟಿದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ. ದಾವಾ ಐಟಂ ನಂ.1ರ ಸ್ವತ್ತು ತಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಎಂದು ತಾವು ಹೇಳಿದ್ದು ಅವರು ಬದುಕಿದ್ದ ಕಾಲದಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ದಾಖಲೆ ಮಾಡುವ ಮೂಲಕ ವರ್ಗಾಯಿಸಿದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ.

5. ನನ್ನ ತಂದೆ ತೀರಿಕೊಂಡ ನಂತರ ಪೌತಿ ಆಧಾರದ ಮೇಲೆ ನನ್ನ ತಾಯಿಯ ಹೆಸರಿಗೆ ದಾವಾ ಐಟಂ ನಂ.1ರ ಸ್ವತ್ತು ಪೌತಿ ಖಾತೆ ಆಗಿದೆ ಎಂದರೆ ಸರಿ. ಬೆಳಕೆರೆ ಗ್ರಾಮದ ಸ ನಂ.66/2 ರಲ್ಲಿ ವಿಸ್ತೀರ್ಣ 31 ಗುಂಟೆ ಯಾರ ಹೆಸರಿಗೆ ಖಾತೆ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿಲ್ಲ ಎನ್ನುತ್ತಾರೆ. ಸದರಿ ಸ ನಂ.66/2 ರ ಆಸ್ತಿ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಲ್ಲ ಎಂದರೆ ಸರಿಯಲ್ಲ. ಪಂಚಾಯಿತಿ ಪಾಲು ಪಾರಿಖತ್ ಮೂಲಕ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದು ಈ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಡಿ-6 ಮತ್ತು 7 ರ ಪಹಣಿ ಪತ್ರಿಕೆಗಳಲ್ಲಿ ನಮೂದಾಗಿರುವ ಸ ನಂ.66/2 ರಲ್ಲಿ ವಿಸ್ತೀರ್ಣ 31 ಗುಂಟೆ, ಸ ನಂ.83/1 ರಲ್ಲಿ ವಿಸ್ತೀರ್ಣ 1 ಎಕರೆ 2 ಗುಂಟೆ, ಸ ನಂ.85/8 ರಲ್ಲಿ ವಿಸ್ತೀರ್ಣ 8 ಗುಂಟೆ ನನ್ನ ದೊಡ್ಡಪ್ಪನ ಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ ಸರಿ. ನಮ್ಮ ತಾಯಿ ತಮ್ಮ ಹೆಸರಿಗೆ ದಾವಾ ಐಟಂ ನಂ.1ರ ಸ್ವತ್ತನ್ನು ನಿಪಿ-3 ರಂತೆ ದಿನಾಂಕ 26.02.2011ರಂದು ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿದ್ದು, ತಮ್ಮ ತಮ್ಮ ನಡುವೆ ಮತ್ತು ವಾದಿ, 3ನೇ ಪ್ರತಿವಾದಿಯರ ನಡುವೆ ವಿಭಾಗ ಆಗಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

6. ದಾವಾ ಐಟಂ ನಂ.1 ರ ಸ್ವತ್ತು ನನ್ನ ತಂದೆ ಓದೇಗೌಡರ ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿ ಇಲ್ಲ ಅವರ ಸ್ವಯಾರ್ಜಿತ ಆಸ್ತಿ ಎನ್ನುತ್ತಾರೆ. ದಾವಾ ಐಟಂ ನಂ.1 ರ ಸ್ವತ್ತು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತು ಎಂದು ಗೊತ್ತಿದ್ದರು ದಾವಾ ಆಸ್ತಿಯನ್ನು ಲಪಾಟಾಯಿಸುವ ಉದ್ದೇಶದಿಂದ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ನನ್ನ ಸಹೋದರನ ಮಗಳು 3ನೇ ಪ್ರತಿವಾದಿ ಇದ್ದರು ಎಂದು ಪ್ರತಿವಾದ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನಿಪಿ-3 ದಾಖಲೆಯನ್ನು 3ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ನಾನು ಮತ್ತು ನನ್ನ ತಾಯಿ ಹಾಗೂ ವಾದಿ ಸೇರಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

7. ತಮ್ಮ ಅಣ್ಣ ದಿ 16.03.1970ರಲ್ಲಿ 10 ಗುಂಟೆ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ತಮ್ಮ ಪ್ರಮಾಣ ಪತ್ರದಲ್ಲಿ ಹೇಳಿದ್ದು ಯಾವ ಸರ್ವೇ ನಂಬರ್ ನಲ್ಲಿ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. 3ನೇ ಪ್ರತಿವಾದಿಯ ವಿವಾಹದ ಸಮಯದಲ್ಲಿ ದಾವಾ ಆಸ್ತಿಗಳ ಭಾಗ ಬೇಕೆಂದು ಕೇಳಲು ಬಂದಾಗ ವಾದಿಯು ಪ್ರಸ್ತುತ ದಾವೆ ಹೂಡಿರುವ ವಿಚಾರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಗೆ ಪ್ರಸ್ತುತ ದಾವೆ ಹೂಡಿರುವ ವಿಚಾರ ಗೊತ್ತಾದ ನಂತರ ದಾವೆಯಲ್ಲಿ ಅರ್ಜಿ ಸಲ್ಲಿಸಿ ತಮ್ಮನ್ನು ಪಕ್ಷಗಾರರಾಗಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ತಂದೆಯ ಪಿತ್ರಾರ್ಜಿತ ಆಸ್ತಿ ಮತ್ತು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ 3ನೇ ಪ್ರತಿವಾದಿಗೆ ಭಾಗ ಬರುವ ಹಕ್ಕು ಇದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಗೆ ಕೊಡಬೇಕಾದ ಭಾಗವನ್ನು ತಪ್ಪಿಸಲು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ